ಮಾಡುವುದಕ್ಕಾಗುವುದಿಲ್ಲ. ಆಡಿಟರ್ಸ್ ಬಂದು, ಕೊಂಡಿದ್ದು ಎಲ್ಲಿಂದ? ಕೊಂಡಿದ್ದಾರೆಯೇ? ಅಥವಾ ಇಲ್ಲವೇ? ದುಡ್ಡು ಎಷ್ಟು ಖರ್ಚಾಗಿದೆ ಎಂದು ನೋಡುತ್ತಾರೆ. ಆಡಿಟ್ ವರದಿಯು ಇನ್ನು ಕೆಲವೇ ದಿನಗಳಲ್ಲಿ ಬರುತ್ತದೆ, ಅದು ಬಂದ ನಂತರ ಸಿ.ಓ.ಡಿ. ಎನ್‌ಕ್ವೈರಿಯಾಗಲೀ ಅಥವಾ ಬೇರೆ ಇನ್ನಾವುದೇ ಎನ್‌ಕ್ವೈರಿಯಾಗಲೀ ನಾವು ಮಾಡಿಸುತ್ತೇವೆ ಎನ್‌ಕ್ವೈರಿ ಬಗ್ಗೆ ಹಿಂಜರಿಯುವುದಿಲ್ಲ ಎನ್ನುವ ಮಾತನ್ನು ಮಾನ್ಯ ಮಂತ್ರಿಯವರು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗಿರುವಂಥ ಅನುಮಾನ ಏನೆಂದರೆ, ಅಲ್ಲಿ ಯಾವುದೇ ದಾಖಲೆ ಇಲ್ಲ. ಆಡಿಟರ್ಸ್ ತನಿಖೆಗೆ ಬರುವುದರೊಳಗೆ ರೈತರುಗಳನ್ನು ಹುಡುಕಿಕೊಂಡು ಹೋಗಿ ನಮ್ಮಿಂದ ಇವರು ಕೊಂಡುಕೊಂಡಿದ್ದಾರೆಂದು ತಿಳಿಸುವ ಪತ್ರಗಳನ್ನು ಪಡೆಯುತ್ತಿದ್ದಾರೆ. ಮಾನ್ಯ ಭೈರೇಗೌಡರ ಬಗ್ಗೆ ವಿಶ್ವಾಸ ಇದೆ. ಅವರೇ ಕ್ಯಾಬಿನೆಟ್ ಸಚಿವರಾಗಿ ಇದರ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕೆಂದು ಮುಖ್ಯ ಮಂತ್ರಿಗಳಿಗೆ ಪತ್ರ ಬರೆಯುವಾಗ ಅವರಿಗೆ ಪರಿಜ್ಞಾನ ಇರಲಿಲ್ಲವೇ? ಕೋ-ಆಪರೇಟಿವ್ ನಿಯಮದ ಪ್ರಕಾರವೇ ತನಿಖೆ ಮಾಡಿಸಬೇಕೆಂದು ಆಗ ಅನಿಸಲಿಲ್ಲವೇ? ಈಗ ಏಕೆ ಬದಲಾವಣೆ ಅವರ ನಿಲುವಿನಲ್ಲಿ?

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ನಮ್ಮ ಹಳ್ಳಿ ಕಡೆ ಒಂದು ಗಾದೆ ಇದೆ, "ಕಳ್ಳ ಮದುವೆಯಲ್ಲಿ ಬಗ್ಗಿ ಓಲಗ ಊದಿದರೆ ಶಬ್ದ ಕಡಿಮೆಯಾಗುವುದಿಲ್ಲ" ಎಂದು 60 ಲಕ್ಷದ್ದು 70 ಲಕ್ಷದ್ದು ಅಡ್ಜಸ್ಟ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈರುಳ್ಳಿ ಖರೀದಿ ಮಾಡಿದ್ದೇವೆಂದು ಕೋಟಿ ಕೋಟಿ ನುಂಗುತ್ತಿದ್ದಾರೆ. ಈರುಳ್ಳಿ ಖರೀದಿ ಮಾಡಿರುವ ರೈತರುಗಳ ಯಾದಿಯನ್ನು ತೋರಿಸಲಿ?

ಅಧ್ಯಕ್ಷರು : ಈರುಳ್ಳಿ ಖರೀದಿ ಮಾಡಿರುವ ಬಗ್ಗೆ ರೈತರುಗಳ ಪಟ್ಟಿಯನ್ನು ಇವರಿಗೆ ಕಳುಹಿಸಿಕೊಡಿ.

ಶ್ರೀ ವಾಟಾಳ್ ನಾಗರಾಜ್ : 60 ಲಕ್ಷ ರೂಪಾಯಿಗಳನ್ನು ಅಡ್ಜಸ್ಟ್ ಮಾಡುವುದಕ್ಕಾಗುವುದಿಲ್ಲವೆಂದು ತಾವು ಹೇಳಿದ್ದೀರಿ. ಹಾಗಾದರೆ ಎಷ್ಟು ಮಾಡಬಹುದು ಸ್ವಾಮಿ?

ಅಧ್ಯಕ್ಷರು : ಅವರ ಬಗ್ಗೆ ನನಗೆ ಅನುಭವ ಇಲ್ಲ. ಅಡ್ಜಸ್ಟ್‌ಮೆಂಟ್ ಏನಿದ್ದರೂ ನಿಮಗೆ ಮತ್ತು ನಂಜೇಗೌಡರಿಗಷ್ಟೇ ಗೊತ್ತು. ನನಗೆ ಗೊತ್ತಿಲ್ಲ.

ಉಡುಪಿಯಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವುದಕ್ಕಾಗಿ ಭೂಮಿಯನ್ನು ಒದಗಿಸುವುದು

292 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸ್ವಂತ ಬಸ್ ನಿಲ್ದಾಣವಿಲ್ಲದೆ ಇರುವುದರಿಂದ ಖಾಸಗಿಯವರ ಜಾಗವನ್ನು ಗೊತ್ತುಪಡಿಸಿ ಸ್ವಾಧೀನ ಪಡಿಸುವ ಬಗ್ಗೆ ಸರ್ಕಾರವು ಏನಾದರೂ ಕ್ರಮ ತೆಗೆದು ಕೊಂಡಿರುವುದೇ?

ಆ) ಈಗಾಗಲೇ ಉಡುಪಿಯನ್ನು ಜಿಲ್ಲೆ ಎಂದು ಘೋಷಿಸಿದ್ದು, ಜನಸಾಂದ್ರತೆ ಹೆಚ್ಚಾಗಿರುವುದರಿಂದ ಕೂಡಲೇ ಜಾಗವನ್ನು ಸ್ವಾಧೀನಪಡಿಸುವುದೇ, ಹಾಗಿದ್ದಲ್ಲಿ ಯಾವಾಗ ಸ್ವಾಧೀನಪಡಿಸಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) :

ಆ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಕಳೆದ ಎರಡು ವರ್ಷಗಳಿಂದ ಇದೇ ಪ್ರಶ್ನೆಯನ್ನು ಮೂರು ಬಾರಿ ಕೇಳಿದ್ದೇನೆ. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದಿಂದ 9 ಎಕರೆ ಖಾಸಗಿ ಭೂಮಿಯನ್ನು ಸಾರಿಗೆ ಸಂಪರ್ಕಕ್ಕಾಗಿ ಭೂ ಸ್ವಾಧೀನ ಮಾಡಿ ಆ ಮೂಲಕ ನಮ್ಮ ಜಿಲ್ಲಾ ಕೇಂದ್ರವಾದ ಮತ್ತು ಧಾರ್ಮಿಕ ಕೇಂದ್ರವಾದ ಉಡುಪಿಗೆ ಒಂದು ಸುಸಜ್ಜಿತವಾದ ಕರ್ನಾಟಕರಾಜ್ಯ ಸಾರಿಗೆ ಬಸ್ ನಿಲ್ದಾಣ ಬೇಕೆಂದು ನಾನು ಕೇಳಿಕೊಂಡಿದ್ದೆ. ಕಳೆದ ಎರಡು ಬಾರಿ ಪ್ರಶ್ನೆ ಕೇಳಿದ್ದಾಗ, ಈ ಬಗ್ಗೆ ಪರಿಶೀಲಿಸುತ್ತೇವೆಂದು ಮಾನ್ಯ ಮಂತ್ರಿಯವರು ಭರವಸೆ ಕೊಟ್ಟಿದ್ದರು. ಈಗಾಗಲೇ ಜಿಲ್ಲಾ ಕೇಂದ್ರವಾಗಿ ಪರಿವರ್ತನೆಯಾಗಿರುವ ನಮ್ಮ ಉಡುಪಿಗೆ ಒಂದು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಅವಶ್ಯಕತೆ ಇದೆ. ಈಗಿರುವ ಮುನಿಸಿಪಲ್ ಬಸ್ ನಿಲ್ದಾಣದಲ್ಲಿ ದಿನ ಒಂದಕ್ಕೆ ನೂರು ರಾಜ್ಯ ಸಾರಿಗೆ ಬಸ್‌ಗಳು ಸಂಚಾರ ಮಾಡುತ್ತಿವೆ. ನೂರು ಬಸ್‌ಗಳು ಬಂದು ಹೋಗುತ್ತಿರುವುದರಿಂದ ಅಲ್ಲಿ ಬಹಳ ಇಕ್ಕಟ್ಟಾದ ಪರಿಸ್ಥಿತಿ ಉದ್ಭವವಾಗಿರುವುದರಿಂದ ಮಾನ್ಯ ಮಂತ್ರಿಯವರು ಇದರ ಬಗ್ಗೆ ಪರಿಶೀಲನೆ ಮಾಡಿ ಆ 9 ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಳ್ಳಬೇಕೆಂದು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಉಡುಪಿಯಲ್ಲಿ ಬಸ್ ನಿಲ್ದಾಣವನ್ನು ಕಟ್ಟಬೇಕೆಂದು ಈ ಹಿಂದೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ ಒಂದು ಹಂತದಲ್ಲಿ ಅದನ್ನು ಕೈ ಬಿಟ್ಟಿರುವುದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಈಗ ಉಡುಪಿಯು ಜಿಲ್ಲಾ ಕೇಂದ್ರವಾಗಿರುವುದರಿಂದ ಮತ್ತು ಇನ್ನು ಮುಂದೆ ಇನ್ನೂ ಹೆಚ್ಚಿನ ಬಸ್‌ಗಳು ಓಡಾಡುವ ಸಂಭವವಿರುವುದರಿಂದ ಬಸ್ ಸ್ಟ್ಯಾಂಡ್ ಕಟ್ಟಲಿಕ್ಕೆ ಜಾಗವನ್ನು ತೆಗೆದುಕೊಳ್ಳಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಉಡುಪಿಯ ಬಸ್ ಸ್ಟ್ಯಾಂಡ್ ಬಹಳ ಮಹತ್ವದ್ದಾಗಿರುತ್ತದೆ. ಒಂದು ನಿಮಿಷಕ್ಕೆ ಒಂದು ಎಕ್ಸ್‌ಪ್ರೆಸ್ ಗಾಡಿ ಬರುತ್ತಿದೆ. ಜೊತೆಗೆ ಖಾಸಗಿ ಬಸಗಳೂ ಬರುತ್ತಿವೆ. ಬಸ್ ಸ್ಟ್ಯಾಂಡ್ ಜಾಗದ ವಿಷಯದಲ್ಲಿ ನಾವೆಲ್ಲರೂ ಸೇರಿಕೊಂಡು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈ ಅಧಿವೇಶನ ಮುಗಿದ ನಂತರ ತಮ್ಮ ಜಿಲ್ಲಾ ಶಾಸಕರುಗಳ ಸಭೆಯನ್ನು ಕರೆಸುತ್ತೇನೆ, ಆ ಸಭೆಯಲ್ಲಿ ನಾವೆಲ್ಲಾ ಕುಳಿತುಕೊಂಡು ಚರ್ಚೆ ಮಾಡೋಣ. ಸಮಂಜಸವಾದ ಜಾಗ ಸಿಗುವುದಾದಲ್ಲಿ ಅದನ್ನು ಸ್ವಾಧೀನಪಡಿಸಿಕೊಂಡು ಮುಂದಿನ ವರ್ಷ ಬಸ್ ಸ್ಟ್ಯಾಂಡ್ ಕೆಲಸವನ್ನು ಪ್ರಾರಂಭ ಮಾಡೋಣ.

ಶ್ರೀ ವಸಂತ್ ವಿ. ಸಾಲಿಯಾನ : ದೂರದ ಊರುಗಳಿಂದ ಉಡುಪಿಗೆ ಬರುವ ಬಸ್‌ಗಳ ಡ್ರೈವರುಗಳು ಮತ್ತು ಕಂಡಕ್ಟರುಗಳು ರಾತ್ರಿ ಹೊತ್ತು ಇಳಿದುಕೊಳ್ಳುವುದಕ್ಕೆ ರೆಸ್ಟ್ ಹೌಸ್ ಇಲ್ಲ. ಅವರುಗಳೆಲ್ಲಾ ಬಸ್ ಸ್ಟ್ಯಾಂಡ್‌ನಲ್ಲೇ ಕಾಲ ಕಳೆಯಬೇಕಾಗುತ್ತದೆ. ಜೊತೆಗೆ ಅವರಿಗೆ ಸ್ನಾನ ಮಾಡುವುದಕ್ಕೆ ವ್ಯವಸ್ಥೆ ಇರುವುದಿಲ್ಲ.

ಅಧ್ಯಕ್ಷರು : ಮೊದಲು ಬಸ್ ಸ್ಟ್ಯಾಂಡ್ ಆಗಲಿ. ಆಮೇಲೆ ಮಿಕ್ಕ ವಿಷಯ.

ಶ್ರೀ ಯು.ಆರ್. ಸಭಾಪತಿ : ಡ್ರೈವರ್‌ಗಳು ಮತ್ತು ಕಂಡಕ್ಟರ್‌ಗಳು ಬೆಳಿಗ್ಗೆ ಸ್ನಾನ ಮಾಡುವುದಕ್ಕೆ ಮತ್ತು ವಿರಮಿಸುವುದಕ್ಕೆ ಸರಿಯಾದಂತಹ ವ್ಯವಸ್ಥೆ ಇಲ್ಲ. ತಾವುಗಳು ಇವುಗಳಿಗೂ ಸಹ ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗಾಗಲೇ ಮಂತ್ರಿಗಳು, ತಾವು ಜಾಗದ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಉಳಿದಂತೆ ಬಸ್ ನಿಲ್ದಾಣ ನಿರ್ಮಿಸುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳಿದ್ದಾರಲ್ಲ, ನೀವು ಜಾಗದ ವ್ಯವಸ್ಥೆಯನ್ನು ಮಾಡಿಕೊಡಿ.

ಹಾಸನ ಜಿಲ್ಲೆಯಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರ.

293 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರ?

ಅ) ಹಾಸನ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ ಶಿಥಿಲಾವಸ್ಥೆಯಲ್ಲಿರುವ ದೇವಾಲಯಗಳೆಷ್ಟು ಅವು ಯಾವುವು?

ಆ) ಅವುಗಳ ದುರಸ್ಥಿ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) 82 ದೇವಾಲಯಗಳು ಪಟ್ಟಿ ಲಗತ್ತಿಸಿದೆ.

ಆ) ಸರ್ಕಾರವು ಈ ಮೇಲ್ಕಂಡ ದೇವಾಲಯಗಳ ಪೈಕಿ 33 ದೇವಾಲಯಗಳ ದುರಸ್ಥಿಗೆ ರೂ. 813000-00ಗಳನ್ನು ಮಂಜೂರು ಮಾಡಿದ್ದು, ಉಳಿದ ಸಂಸ್ಥೆಗಳಿಗೆ 1997-98ನೇ ಸಾಲಿನಲ್ಲಿ ಹಣದ ಲಭ್ಯತೆಗನುಗುಣವಾಗಿ ಹಣ ಮಂಜೂರು ಮಾಡಲು ಪರಿಶೀಲಿಸಲಾಗುವುದು.